**ಈ ವಾರದ ಪಾಠವನ್ನು ಸಬ್ಬತ್ತಿಗಾಗಿ ಅಧ್ಯಯನ ಮಾಡಿರಿ, ಜನವರಿ 20.**

**ಪಾಠ 3** **ಜನವರಿ 13–19**

# ದೇವರೋ ಅಥವಾ ಸಂಪತ್ತೋ

## ಸಬ್ಬತ್ತಿನ ಮಧ್ಯಾಹ್ನ

ಈ ವಾರದ ಪಾಠದ ಅಧ್ಯಯನಕ್ಕಾಗಿ:ಕೀರ್ತನೆ 33:6–9 ಮತ್ತಾಯ 19:16–22: 1 ಪೇತ್ರ 1:18 ಇಬ್ರಿಯರಿಗೆ 2:14,15 ವಿಮೋಚನೆಕಾಂಡ 9:14; ಕೀರ್ತನೆ 50:10.

**ಸ್ಮರಣವಾಕ್ಯ: "ಈ ಕಾರಣದಿಂದ ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಗೆ ದಯಪಾಲಿಸಿದ್ದಾನೆ. ಆದದರಿಂದ ಸ್ವರ್ಗ ಮರ್ತ್ಯಪಾತಾಳಗಳಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು ಯೇಸು ಕ್ರಿಸ್ತನನ್ನು ಓಡೆಯನೆಂದು ಪ್ರತಿಜ್ಞೆಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು." (ಫಿಲಿಪ್ಪಿಯವರಿಗೆ 2:9–11)**

ಲೋಕದ ಮೇಲಿನ ಅಸೆ ಮತ್ತು ವ್ಯಾಮೋಹದ ಕುರಿತಾಗಿ ವಿವರಿಸುವಾಗ ದೇವರು ಅನೇಕ ಪದಗಳನ್ನು ವ್ಯರ್ಥವಾಗಿ ಉಪಯೋಗಿಸುವುದಿಲ್ಲ. ಶ್ರೀಮಂತ ಯೌವನಸ್ಥನು ದೇವರಿಂದ ಆಶೀರ್ವಾದ ಹೊಂದಿದ್ದರೂ ಕೂಡ, ತನ್ನಲ್ಲಿದ ಆಸ್ತಿಯ ಕಾರಣವಾಗಿ ದುರಾಶೆಯಿಂದ ತುಂಬಿದವನಾಗಿರುವ ಉದಾಹರಣೆಯು ನಮ್ಮಲ್ಲಿ ಭಯವನ್ನು ಹುಟ್ಟಿಸಬೇಕಾಗಿದೆ. 'ಆದರೆ ದೇವರು ಅವನಿಗೆ ಬುದ್ದಿಹೀನನು ನೀನು!" ಈ ಹೊತ್ತು ರಾತ್ರಿ ನಿನ್ನ ಪ್ರಾಣವನ್ನು ನಿನ್ನ ಕಡೆಯಿಂದ ಕೇಳುವರು; ಆಗ ನೀನು ಸಿದ್ದ ಮಾಡಿಟ್ಟಿರುವದು ಯಾರಿಗಾಗುವದು ಎಂದು ಹೇಳಿದನು ತನಗೋಸ್ಕರ ದ್ರವ್ಯವನ್ನಟ್ಟುಕೊಂಡು ದೇವರ ವಿಷಯಗಳಲ್ಲಿ ಐಶ್ವರ್ಯವಂತನಾಗದೆ ಇರುವವನು ಅವನಂತೆಯೇ ಇದ್ದಾನೆ ಅಂದನು. (ಲೂಕ 12:20, 21)

ದೇವರನ್ನು ಸೇವಿಸುವುದು ಮತ್ತು ಹಣವನ್ನು ಆಶಿಸುವುದು ಮೀಸಲಾದ ಕ್ರಿಯೆಗಳು. ಇದರಲ್ಲಿ ಒಂದನ್ನು ಮಾತ್ರ ನಾವು ಆಯ್ಕೆ ಮಾಡಬೇಕಾಗುತ್ತದೆ. ಎರಡನ್ನೂ ಹೊಂದುವುದರಿಂದ ಜೀವನವನ್ನು ಸುಲಭವಾಗಿ ನಡೆಸಬಹುದು ಎಂದು ಆಲೋಚಿಸುವುದರಿಂದ ಯಾವುದೋ ಒಂದು ದಿನ ಸಿಕ್ಕಿಹಾಕಿಕೊಳ್ಳುತ್ತೇವೆ. ನಾವು

ಇತರರನ್ನು ಮೂರ್ಖರನ್ನಾಗಿಸಬಹುದು, ಒಂದು ವೇಳೆ ನಮ್ಮನ್ನು ನಾವು ಮೂರ್ಖರನ್ನಾಗಿಸಿಕೊಳ್ಳಬಹುದು, ಆದರೆ ಒಂದು ದಿನ ನ್ಯಾಯ ತೀರ್ಪಿನಲ್ಲಿ ಲೆಕ್ಕವನ್ನು ಒಪ್ಪಿಸಬೇಕಾದ ದೇವರನ್ನು ಮಾತ್ರ ಮೋಸಗೊಳಿಸಲು ಸಾಧ್ಯವಿಲ್ಲ.

ನಾವು ಆಯ್ಕೆಯನ್ನು ಮಾಡಬೇಕಾಗಿದೆ,ನಾವು ಎಷ್ಟು ಹಿಂಜರಿಯುತ್ತೆವೋ, ಅಥವಾ ಕಾರಣಗಳನ್ನು ನೀಡುತ್ತೆವೋ, ಅಥವಾ ನಿರ್ಧಾರಗಳನ್ನು ಮುಂದಕ್ಕೆ ಹಾಕುತ್ತೆವೋ, ಅಷ್ಟು ಪ್ರಬಲವಾಗಿ ಹಣ ಮತ್ತು ಹಣದ ವ್ಯಾಮೋಹ ನಮ್ಮ ಮೇಲೆ ಹಿಡಿತವನ್ನು ಸಾಧಿಸುತ್ತದೆ.ನಂಬಿಕೆಯು ತೀರ್ಮಾನವನ್ನು ಬಯಸುತ್ತದೆ.

ದೇವರು ಯಾರು? ಆತನು ನಮಗಾಗಿ ಏನು ಮಾಡಿದ್ದಾನೆ? ಮತ್ತು ನಾವು ಆತನಗೆ ಏನು ನೀಡಬೇಕಾಗಿದೆ, ಎಂಬ ಆಲೋಚನೆಯು ನಾವು ತೀರ್ಮಾನ ತೆಗೆದುಕೊಳ್ಳುವ ವಿಧಾನವನ್ನು ಸುಲಭವಾಗಿತ್ತದೆ.

**ಪಾಠ 3ದೇವರೋ ಅಥವಾ ಸಂಪತ್ತೋ** **ಜನವರಿ 14**

**ಭಾನುವಾರ**

## ಕ್ರಿಸ್ತನು, ನಮ್ಮ ಸೃಷ್ಟಿ ಕರ್ತನು

ಆದಿಕಾಂಡ 1;1; ಕೀರ್ತನೆ 33:6–9; ಯೆಶಾಯ 45:11, 12; ಯೆರೆಮಿಯ 51:5 ಮತ್ತು ಯೋಹಾನ 1;3 ನ್ನು ಓದಿರಿ ಈ ವಚನಗಳು ಈ ಲೋಕದ ವಸ್ತುಗಳ ಕುರಿತಾಗಿ ಏನು ಹೇಳುತ್ತವೆ.

‘ಕ್ರಿಸ್ತನು ಆಕಾಶವನ್ನು ಹರಡಿದನು, ಮತ್ತು ಈ ಲೋಕದ ಅಸ್ತಿವಾರಗಳನ್ನು ಹಾಕಿದನು.ಆತನ ಕೈಗಳು ಶೂನ್ಯದಲ್ಲಿ ಲೋಕಗಳನ್ನು ತೂಗುಹಾಕಿದವು, ಮತ್ತು ಆತನು ಬಯಲಿನ ಹೂವುಗಳನ್ನು ವಿನ್ಯಾಸಗೊಳಿಸಿದನು. ಬಲದಿಂದ ಪರ್ವತಗಳನ್ನು ಸ್ಥಿರವಾಗಿ ನಿಲ್ಲಿಸಿದವನೂ? ಆತನೇ ಸಮುದ್ರವನ್ನು ನಿರ್ಮಿಸಿದವನು ಅದು ಆತನದೇ? ಕೀರ್ತನೆ 65:6, 95;5 ಆತನು ಭೂಮಿಯನ್ನು ಸುಂದರವಾಗಿ ನಿರ್ಮಿಸಿದನು,ಮತ್ತು ಗಾಳಿಯನ್ನು ಹಾಡಿನಂದ ತುಂಬಿದನು, ಈ ಲೋಕದ ಎಲ್ಲಾ ವಸ್ತುಗಳ ಮೇಲೆ ಅಂದರೆ ಗಾಳಿ, ಮತ್ತು ಆಕಾಶಗಳ ಮೇಲೆ ಆತನು ತನ್ನ ತಂದೆಯ ಪ್ರೀತಿಯನ್ನು ಬರೆದನು. ಎಲೆನ್ ಜಿ ವೈಟ್ ದಿ ಡಿಸೈರ್ ಆಫ್ ಎಜಸ್ ಪುಟ 20.



ಈ ಲೋಕದ ವಸ್ತುಗಳು ತಮ್ಮಷ್ಟಕ್ಕೆ ಅವು ಕೆಟ್ಟವುಗಳಲ್ಲ. ಈ ಲೋಕದ ವಸ್ತುಗಳು ಮತ್ತು ಅದರಲ್ಲಿರುವ ವಸ್ತುಗಳು ಕೆಟ್ಟವುಗಳು ಮತ್ತು ಆತ್ಮೀಯ ವಿಷಯಗಳು ಮಾತ್ರ ಒಳ್ಳೆಯವುಗಳು ಎಂದು ಬೇರೆ ಧರ್ಮಗಳು ಬೋಧಿಸುತ್ತವೆ. ಆದರೆ ಸತ್ಯವೇದವು ಲೋಕದ ವಸ್ತುಗಳಿಗೆ ಬೆಲೆ ಕೊಡುತ್ತದೆ.

ಯಾಕೆಂದರೆ ಯೇಸುವು ತಾನೇ ಅವುಗಳನ್ನು ಸೃಷ್ಟಿಸಿದನು. ಹಾಗಾದರೆ ಅವು ಹೇಗೆ ಕೆಟ್ಟದಾಗಲು ಸಾಧ್ಯ? ಅವು ಕೆಟ್ಟವಾಗಬಹುದು, ದುರಾದೃಷ್ಟವಶಾತ್, ದೇವರ ಎಲ್ಲಾ ವರಗಳೂ ಕೂಡ ಹಾಗೆಯೇ, ಅವುಗಳನ್ನು ತಿರುಚಿ ಕೆಟ್ಟವುಗಳಾಗಿ ಉಪಯೋಗಿಸಲಾಗಿದೆ. ಆದರೆ ಅದರಿಂದ ಮೂಲ ಆಶೀರ್ವಾದವು ಕೆಟ್ಟದ್ದಲ್ಲ. ದೇವರು ಈ ಲೋಕದಲ್ಲಿ ಸೃಷ್ಟಿಮಾಡಿದ ವಸ್ತುಗಳನ್ನು ಹೇಗೆ ಕೆಟ್ಟ ಕಾರ್ಯಗಳಿಗೆ ಉಪಯೋಗಿಸಲಾಗುತ್ತದೆ ಎಂಬುದರ ಕುರಿತಾಗಿ ಸತ್ಯವೇದವು ನಮ್ಮನ್ನು ಎಚ್ಚರಿಸುತ್ತದೆ. ಆದರೆ ಅವು ಕೆಟ್ಟವುಗಳು ಎಂದು ಸತ್ಯವೇದವು ಬೋಧಿಸುವುದಿಲ್ಲ.

ಇದಕ್ಕೆ ವಿರುದ್ದವಾಗಿ ದೇವರು ವಸ್ತುಗಳನ್ನು ಸೃಷ್ಟಿಸಿದನು,ಈ ಲೋಕದ ಒಳಿತಿಗಾಗಿ ಮನುಷ್ಯನು ಅವುಗಳನ್ನು ಉಪಯೋಗಿಸಿಕೊಳ್ಳಬೇಕೆಂದು ದೇವರು ಬಯಸುತ್ತಾನೆ. ಆತನು ಅದುಕೊಂಡ ಸ್ಥಳಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ನಮ್ಮ ಇಷ್ಟಾನುಸಾರ ದನ ಕುರಿ, ದ್ರಾಕ್ಷಾರಸ, ಮದ್ಯ ಮೊದಲಾದವುಗಳನ್ನು ಕೊಂಡುಕೊಂಡು ನೀವೂ ನಮ್ಮ ಮನೆಯವರೂ ನಮ್ಮ ಊರಿನ ಲೇವಿಯರುನಮ್ಮ ದೇವರಾದ ಯೆಹೋವನ ಸನ್ನಿಧಿಯಲ್ಲಿ ಊಟಮಾಡಿ ಸಂತೋಷವಾಗಿರಬೇಕು. (ಧರ್ಮೋಪದೇಶಕಾಂಡ 26:11, ಧರ್ಮೋಪದೇಶಕಾಂಡ 14:26 ನ್ನು ಕೂಡ ಓದಿರಿ.

ಯೇಸುವು ಸೃಷ್ಟಿ ಕರ್ತನು. (ಯೋಹಾನ 1:1–3), ಮತ್ತು ಭೂವಿಯು ಆತನ ಕೈಚಳಕವಾಗಿದೆ. ಆತನ ಈ ಸೃಷ್ಟಿಯ ಸಾಮರ್ಥ್ಯವು ಜೀವನ ಮತ್ತು ಅದರ ಕುರಿತಾದ ವಿಶೇಷವಾದ ಆಲೋಚನೆಯನ್ನು ನಮಗೆ ನೀಡುತ್ತದೆ, ಮತ್ತು ಆತನು ಅವುಗಳನ್ನು ನಮ್ಮ ಉಪಯೋಗಕ್ಕಾಗಿ ಮತ್ತು ನಮ್ಮ ಮನೋರಂಜನೆಗಾಗಿ ನೀಡಿದನು ಎಂದು ತಿಳಿಸುತ್ತದೆ. ಈ ಬಹುಮಾನಗಳನ್ನು ತಿರುಚಿದಾಗ ಆಥವಾ ಅವುಗಳ ಮನಸ್ಸನ್ನು ಕೆಂದ್ರಿಕರಿಸಿದಾಗ ಏನಾಗುತ್ತದೆ ಎಂದು ಆತನಗೆ ತಿಳಿದಿದೆ. ಅದರ ಬದಲಿಗೆ ಅವುಗಳನ್ನು ನಾವು ಆತನ ಮಹಿಮೆಗಾಗಿ ಉಪಯೋಗಿಸಬೇಕಾಗಿದೆ.

ಸೃಷ್ಟಿಯಲ್ಲಿ ಕಾಣುವ ಅದ್ಭುತವಾದ ವಸ್ತುಗಳನ್ನು ಗಮನಿಸಿರಿ. ಪಾಪ ತೀವ್ರವಾದ ಪರಿಣಾಮದ ನಡುವೆಯೂ ಕೂಡ ಅವುಗಳಲ್ಲಿ ಸುಂದರತೆಯನ್ನು ಕಾಣಬಹುದು, ಈ ಲೋಕದ ಎಲ್ಲಾ ಸುಂದರವಾದ ವಸ್ತುಗಳು ಅವುಗಳನ್ನು ನಿರ್ಮಿಸಿದಾತನ ಕುರಿತಾಗಿ ಏನು ಹೇಳುತ್ತವೆ?

**ಪಾಠ 3 ದೇವರೋ ಅಥವಾ ಸಂಪತ್ತೋ** **ಜನವರಿ 15**

**ಸೋಮವಾರ**

## ದೇವ ಕುಮಾರನು/ ಮನುಷ್ಯ ಕುಮಾರನು

ಕ್ರೈಸ್ತರಾಗಿ ಯೇಸುವು ಸಂಪೂರ್ಣವಾಗಿ ದೇವರು ಮತ್ತು ಸಂಪೂರ್ಣವಾಗಿ ಮನುಷ್ಯನು ಎಂದು ನಾವು ನಂಬುತ್ತೇವೆ. ಈ ದೈವಿಕ ಮತ್ತು ಮಾನವ ಸಂಯೋಜನೆಯು ಈ ಲೋಕದ ವಿಚಾರವಾಗಿ ಮತ್ತು ಬರಲಿರುವ ನಿತ್ಯತ್ವದ ಕುರಿತಾಗಿ ನಮಗೆ ವಿಶೇಷವಾದ ಪಾಠವನ್ನು ಕಲಿಸುತ್ತದೆ. ಈ ದೈವಿಕ ಮತ್ತು ಮಾನವ ಸ್ವಭಾವಗಳನ್ನು ಆತನು ಹೇಗೆ ಹೊಂದಲು ಸಾಧ್ಯವೆಂದು ಅರ್ಥಮಾಡಿಕೊಳ್ಳಲು ಸಾಧ್ಯವಾಗದಿದ್ದರೆ ಅದು ಅಸಾಧ್ಯವೆಂದು ವಾದಿಸಲು ಸಾಧ್ಯವಿಲ್ಲ. ಒಬ್ಬ ವ್ಯಕ್ತಿಯು ವಿಮಾನಶಾಸ್ತ್ರದ ಕುರಿತಾಗಿ ತಿಳಿದುಕೊಳ್ಳಲು ಆಗದಿದ್ದರೆ ಆಕಾಶದಲ್ಲಿ ವಿಮಾನ ಹಾರಾಡಲು ಸಾಧ್ಯವಿಲ್ಲ ಎಂದು ವಾದಿಸಿದಂತೆ ಅದು ಮೂರ್ಖತನದ ವಾದವಾಗುತ್ತದೆ. ತ್ರೈಯೇಕತ್ವದಲ್ಲಿ ಐಕ್ಯತೆ ಮತ್ತು ಯೇಸುವಿನ ಸ್ವಭಾವದಲ್ಲಿ ಮಾನವತೆಯು ಸೇರಿಕೊಂಡಿದೆ. 'ಮಾನವತಾರದ ಈ ಅದ್ಭುತವಾದ ಸತ್ಯಕ್ಕಿಂತ ಸುಂದರವಾದ ವಿಷಯ ಇನ್ನೊಂದಿಲ್ಲ.' ಜೆ. ಐ ಪ್ಯಾಕರ್ ನೋಯಿಂಗ್ ಗಾಡ್ (ದೊವ್ನೆರ್ಸ್ ಗ್ರೂವ್, ಇಲಿನೋಇಸ್: ಇಂಟರ್ ವಾರ್ಸಿಟಿ ಪ್ರೆಸ್. 1973), ಪುಟ 53.

ದೇವರು ನಮ್ಮನ್ನು ಎಷ್ಟು ಪ್ರೀತಿಸುತ್ತಾನೆ ಮತ್ತು ನಮ್ಮ ಕುರಿತಾಗಿ ಆತನಗೆ ಎಷ್ಟು ಕಾಳಜಿ ಇದೆ ಎಂದು ಲೋಕಕ್ಕೆ ತಿಳಿಸಲು ಯೇಸುವು ಈ ಲೋಕಕ್ಕೆ ಮನುಷ್ಯನಾಗಿ ಬಂದನು. ಆತನು ದೂರದಲ್ಲಿರುವ ವಿಗ್ರಹ ಎಂದು ಕೆಲವರು ನಂಬುವ ರೀತಿಯಲ್ಲಿ ಅಲ್ಲದೆ ನಮ್ಮ ಪರಲೋಕದ ತಂದೆಯ ನಿಜವಾದ ಸ್ವಭಾವವನ್ನು ಯೇಸುವು ಬಹಿರಂಗಪಡಿಸಿದನು.



ಸೈತಾನನು ಮಾನವನನ್ನು ದೇವರಿಂದ ದೂರ ಮಾಡಲು ಪ್ರಯತ್ನಿಸಿದನು.ಅವನು ಮಾನವನನ್ನು ಒಂಟಿಯಾಗಿ ಮಾಡಲು ಪ್ರಯತ್ನಿಸಿದನು. ಅವನು ದೇವರನ್ನು ನಮ್ಮ ಕುರಿತಾಗಿ ಕಾಳಜಿ ಇಲ್ಲದವನಾಗಿ ಬಿಂಬಿಸಿದನು.ಅದಕ್ಕಾಗಿ ಏನೇನೂ ಮಾಡಬೇಕೋ ಅದನ್ನು ಮಾಡುತ್ತಾನೆ. ಇದರಿಂದ ನಾವು ದೇವರ ನಿಜವಾದ ಸ್ವಭಾವವನ್ನು ಮತ್ತು ಕೃಪೆಯನ್ನು ಅರ್ಥಮಾಡಿಕೊಳ್ಳದೆ ಆತನನ್ನು ತಪ್ಪಾಗಿ ಅರ್ಥ ಮಾಡಿಕೊಳ್ಳಬೇಕೆಂದು ಪ್ರಯತ್ನ ಮಾಡುತ್ತಾನೆ. ಈ ಲೋಕದ ವಸ್ತುಗಳ ಮೇಲಿನ ವ್ಯಾಮೋಹವು ಸೈತಾನನ ಒಂದು ಪ್ರಬಲವಾದ ಅಸ್ತ್ರವಾಗಿ ಈ ಕಾರ್ಯಕ್ಕೆ ಉಪಯೋಗವಾಗುತ್ತದೆ.

ಮತ್ತಾಯ 19: 16–22 ನ್ನು ಓದಿರಿ ಸೈತಾನನು ಈ ಲೋಕದ ವಸ್ತುಗಳ ಮೇಲಿನ ಪ್ರೀತಿಯನ್ನು ಹೇಗೆ ಉಪಯೋಗಿಸಿಕೊಂಡು ನಮ್ಮನ್ನು ದೇವರಿಂದ ದೂರ ಮಾಡಲು ಪ್ರಯತ್ನಿಸುತ್ತಾನೆ ಎಂಬುದನ್ನು ಈ ಸನ್ನಿವೇಶವು ತಿಳಿಸುತ್ತದೆ.?

---

---

ಯೇಸುವನ್ನು ಕುರಿತಾಗಿ ಒಮ್ಮೆ ಆಲೋಚಿಸಿರಿ ಯೇಸುವು ಒಬ್ಬ ವಿಶೇಷವಾದ ವ್ಯಕ್ತಿಯೆಂದು ಭಾವಿಸಿದ ಶ್ರೀಮಂತ ಯೌವನಸ್ಥನ ಜೊತೆಯಲ್ಲಿ ದೇವರು ಮಾನವನ ಶರೀರದಲ್ಲಿ ಮಾತನಾಡುವುದನ್ನು ಊಹಿಸಿರಿ. ಅದರೂ ಏನು ನಡೆಯಿತು? ಅವನು ಅಪಾರವಾದ ಆಸ್ತಿಯು ಲೋಕದ ವಸ್ತುಗಳ ಮೇಲಿನ ಮೋಹವು ಸ್ವತಃ ದೇವರಿಂದ ಅವನನ್ನು ದೂರಮಾಡಿತು. ಲೋಕದ ಮೇಲಿನ ಅಸೆ ಮತ್ತು ವಸ್ತುಗಳ ಮೇಲಿನ ಮೋಹವು ಅವನಗೆ ದುಃಖವಾದರೂ ಕೂಡ ಆ ದುಃಖವು ಸರಿಯಾದ ತೀರ್ಮಾನವನ್ನು ಮಾಡಲು ಅವನಗೆ ಸಹಾಯ ಮಾಡಲಿಲ್ಲ. ಅವನ ಅಸ್ತಿಯನ್ನು ಕಳೆದುಕೊಳ್ಳುತ್ತೇನೆ ಎಂದು ದುಃಖಪಡಲಿಲ್ಲ. ಆದರೆ ವಸ್ತುಗಳಿಗೆ ಬದಲಾಗಿ ತನ್ನ ಆತ್ಮವನ್ನೇ ಕಳೆದುಕೊಳ್ಳುತ್ತಿದ್ದೇನೆ ಎಂದು ದುಃಖಪಟ್ಟನು.

ನಾವು ಶ್ರೀಮಂತರೋ ಅಥವಾ ಬಡವರೋ ಈ ಲೋಕದ ಮೇಲಿನ ವಸ್ತುಗಳ ಜೊತೆಯಲ್ಲಿ ನಾವು ಯಾವ ರೀತಿಯ ಸಂಬಂಧವನ್ನು ಹೊಂದಬೇಕು ಎಂಬುದರ ಕುರಿತಾಗಿ ನಾವು ಎಷ್ಟು ನಿರ್ಧಿಷ್ಟವಾಗಿರಬೇಕು?

**ಪಾಠ 3 ದೇವರೋ ಅಥವಾ ಸಂಪತ್ತೋ ಜನವರಿ 16**

**ಮಂಗಳವಾರ**

## ಕ್ರಿಸ್ತನು, ವಿಮೋಚಕನು

ಸಾಲ ಪರಲೋಕದ ನಿಯಮವಲ್ಲ, ಆದರೆ ಅದಾಮ ಮತ್ತು ಹವ್ವಳು ಪಾಪ ಮಾಡಿದರು, ಮತ್ತು ಆಜ್ಞೆಯ ಅತಿಕ್ರಮಣ ಮರಣವಾಗಿದೆ. ಇದರಿಂದ ಮಾನವರು ದೈವಿಕ ನ್ಯಾಯದ ಮುಂದೆ ಸಾಲಗಾರರಾದರು. ನಾವು ದಿವಾಳಿಗಳಾದೆವು. ನಾವು ತೀರಿಸಲಾಗದ ಆತ್ಮೀಯ ಸಾಲದಲ್ಲಿ ಮುಳುಗಿದೆವು.

ನಮ್ಮ ಮೇಲಿನ ದೇವರ ಪ್ರೀತಿಯು ವಿಮೋಚನೆಯ ಯೋಜನೆಯನ್ನು ಜಾರಿಗೆ ತಂದಿತು. ಯೇಸುವು ನಮಗೆ 'ಜಾಮೀನು'ದಾರನು. (ಇಬ್ರಿಯ7:22) ಕ್ರಿಸ್ತನು ನಮ್ಮ ಪರವಾಗಿ ವಿಮೋಚಕನಾಗಿ ಮಾಡಿದ ಅತಿದೊಡ್ಡ ವ್ಯವಹಾರವಾಗಿತ್ತು. ದೈವಿಕ ನ್ಯಾಯದ ಮುಂದೆ ಇದ್ದ ಸಾಲವನ್ನು ತೀರಿಸಲು ಆತನ ಬಲಿದಾನ ಮಾತ್ರ ಯೋಗ್ಯವಾಗಿತ್ತು. ಕ್ರಿಸ್ತನು ಶಿಲುಬೆಯಲ್ಲಿ ಮರಣವನ್ನು ಹೊಂದುವುದರ ಮೂಲಕ ನಮ್ಮ ಮೇಲಿದ್ದ ಸಾಲದ ಹೊರೆಯನ್ನು ತೀರಿಸಿದನು. ಮಾನವತೆಯ ಬಿಡುಗಡೆಗಾಗಿ ಇಂತಹ ದೊಡ್ಡ ಮೊತ್ತದ ವ್ಯವಹಾರವನ್ನು ಇಡೀ ಪ್ರಪಂಚವೇ ಬೆರಗಾಗಿ ನೋಡುತ್ತಾ ನಿಂತಿತು. (ಎಫೆಸ 5:2)

ಕ್ರಿಸ್ತನಲ್ಲಿ ದೇವರು ಇಡೀ ಪರಲೋಕದ ಖಜಾನೆಯನ್ನು ಖಾಲಿ ಮಾಡಿ ಈ ಲೋಕಕ್ಕೆ ಕೊಟ್ಟನು. ಇದರಿಂದ ದೇವರು ಎಲ್ಲಾ ಮನುಷ್ಯರ ಮನಸ್ಸು, ಆಸೆ, ಇಚ್ಛೆ, ಆತ್ಮವನ್ನು ಕೊಂಡುಕೊಂಡನು. **ಎಲೆನ್ ಜಿ ವೈಟ್, ಕ್ರೈಸ್ಟ್ ಆಬ್ಜೆಕ್ಟ್ ಲೆಸೆನ್ಸ್, ಪುಟ 326.**

ಕ್ರಿಸ್ತನು ನಮ್ಮನ್ನು ಯಾವುದರಿಂದ ರಕ್ಷಿಸಿದನು ಎಂಬುದಾಗಿ ಈ ಕೆಳಗಿನ ವಚನಗಳು ಏನು ಹೇಳುತ್ತವೆ. ಕೊಲಸ್ಸೆ 1:13; 1 ಥೆಸಲೋನಕ 1:10; 1 ಪೇತ್ರನು 1:18; ಇಬ್ರಿಯ 2:14, 15; ಗಲಾತ್ಯ 3:13; ಪ್ರಕಟಣೆ 1:5.

ಯೋಹಾನ 19:30 ರಲ್ಲಿ ಬಾಷಾಂತರ ಮಾಡಲಾಗಿರುವ "ಟೆಲಿಲೆಸ್ತೈ" ಪದವು ಉಚ್ಚರಿಸಲಾಗಿರುವ ಎಲ್ಲಾ ಪದಗಳಲ್ಲಿ ಶ್ರೇಷ್ಠವಾದ ಪದ ಎಂದು ಹೇಳಲಾಗುತ್ತದೆ. ಅದರ ಅರ್ಥ "ಮುಕ್ತಾಯವಾಯಿತು" ಯೇಸು ಶಿಲುಬೆಯ ಮೇಲೆ ನುಡಿದ ಕೊನೆಯ ಪದವಾಗಿತ್ತು. ಆತನ ಕೊನೆಯ ಪ್ರಕಟಣೆಯು ನಮ್ಮ ಮೇಲೆ ಇದ್ದ ?ಸಾಲ?ದ



ಹೊರೆಯನ್ನು ಪೂರ್ಣವಾಗಿ ಸಲ್ಲಿಸುವ ಕಾರ್ಯವು ಸಂಪೂರ್ಣವಾಯಿತು ಎಂದು ದೃಢಪಡಿಸಿತು. ಆತನು ಈ ಮಾತನ್ನು ನಿರೀಕ್ಷೆಯಿಲ್ಲದವನಾಗಿ ಹೇಳಲಿಲ್ಲ ಬದಲಿಗೆ ಕಳೆದು ಹೋದ ಲೋಕವನ್ನು ವಿಮೋಚಿಸಿದ ಜಯಧ್ವನಿಯಲ್ಲಿ ಹೇಳಿದನು. ಶಿಲುಬೆಯನ್ನು ದೃಷ್ಟಿಸುವುದರಿಂದ ಭೂತಕಾಲದ ಸನ್ನಿವೇಶಗಳನ್ನು ವರ್ತಮಾನದ ಪರಿಣಾಮವನ್ನು ಮತ್ತು ಭವಿಷ್ಯದ ನಿರೀಕ್ಷೆಯನ್ನು ನೋಡುವಂತೆ ಮಾಡುತ್ತದೆ. ಪಾಪ, ಮರಣ, ಮತ್ತು ಸೈತಾನನ ಕೆಲಸಗಳನ್ನು ಒಂದೇ ಬಾರಿಗೆ ಸಂಪೂರ್ಣವಾಗಿ ನಾಶ ಮಾಡಲು ಯೇಸುವು ತನ್ನ ಜೀವವನ್ನು ಕೊಟ್ಟನು. ಇದರ ಅರ್ಥವೇನೆಂದರೆ ನಾವು ಅರ್ಹತೆಯಿಲ್ಲದವರಾಗಿದ್ದರೂ ಕೂಡ ನಮ್ಮನ್ನು ವಿಮೋಚಿಸಲಾಯಿತು. (ಎಫೆಸ 1:7) ಇದರ ಮೂಲಕ ನಾವು ರಕ್ಷಣೆಯ ಅದ್ಭುತಗಳನ್ನು ನೋಡಲು ಮತ್ತು ಪರಿಶುದ್ದವಾದ ನೆಲದಲ್ಲಿ ಕಾಲಿಡಲು ನಮಗೆ ಅವಕಾಶವನ್ನು ಕಲ್ಪಿಸಲಾಯಿತು.

ಕ್ರಿಸ್ತನು ನಮ್ಮ ವಿಮೋಚಕನಾಗಿ ಕಾಣುವುದು ದೇವರ ಅತ್ಯಂತ ಭವ್ಯವಾದ ಚಿತ್ರಣವಾಗಿದೆ. ಆತನ ಅತೀ ಮುಖ್ಯವಾದ ಅಸಕ್ತಿಯಿಂದರೆ ನಮ್ಮನ್ನು ಬಿಡಿಸುವುದು. ಇದು ದೇವರು ಮಾನವತೆಯನ್ನು ನೋಡುವ ವಿಧಾನ ಮತ್ತು ನಮ್ಮ ಜೊತೆಯಲ್ಲಿ ಆತನ ಸಂಬಂಧವನ್ನು ತೋರಿಸುತ್ತದೆ. ನ್ಯಾಯಕ್ಕೆ ಸಮಾಧಾನವನ್ನು ನೀಡಿ ನಾವು ಆತನ ಬಲಿದಾನಕ್ಕೆ ನೀಡುವ ಪ್ರತಿಕ್ರಿಯೆಗಾಗಿ ತನ್ನ ದೃಷ್ಟಿಯನ್ನು ನಮ್ಮ ಕಡೆಗೆ ತಿರುಗಿಸುತ್ತಾನೆ. ಇದರ ಕುರಿತಾಗಿ ಆಲೋಚಿಸಿರಿ: ಕ್ರಿಸ್ತನು ಸಾಲವನ್ನು ತೀರಿಸಿದನು, ನಾವು ಮಾಡಿದ ಎಲ್ಲಾ ಕೆಟ್ಟ ಕಾರ್ಯಗಳಿಗೆ ಪ್ರತಿಯಾಗಿ ಕ್ರಿಸ್ತನು ಸಾಲವನ್ನು ಪೂರ್ತಿ ಮತ್ತು ಸಂಪೂರ್ಣವಾಗಿ ತೀರಿಸಿದನು. ಇದಕ್ಕೆ ನಿಮ್ಮ ಪ್ರತಿಕ್ರಿಯೆ ಏನಾಗಿದೆ? (ಯೋಬನು 42:5,6)

**ಪಾಠ 3 ದೇವರೋ ಅಥವಾ ಸಂಪತ್ತೋ ಜನವರಿ 17**

**ಬುಧವಾರ**

## ಸ್ವಗೌರವವುಳ್ಳ ದೇವರು

ಫರೋಹನ ಜೊತೆಯ ವಾಗ್ವಾದದಲ್ಲಿ ದೇವರು ಹೀಗೆ ಪ್ರಕಟಿಸುತ್ತಾನೆ. 'ಈ ಸಾರಿ ನಾನು ನನ್ನ ವಶದಲ್ಲಿರುವ ಈತಿಬಾಧೆಗಳನ್ನು ನಿನ್ನ ಪ್ರಜಾಪರಿವಾರದವರಿಗೆ ಉಂಟಾಗುವಂತೆಯೂ ನಿನ್ನ ಹೃದಯಕ್ಕೂ ತಗಲುವಂತೆಯೂ ಮಾಡುವೆನು. ಆದರಿಂದ ಸಮಸ್ತ ಲೋಕದಲ್ಲಿ ನನಗೆ ಸಮಾನರು ಬೇರೆ ಯಾರು ಇಲ್ಲವೆಂದು ನನ್ನ ವಿಷಯದಲ್ಲಿ

ತಿಳುಕೊಳ್ಳುವಿ." (ವಿಮೋಚನೆಕಾಂಡ 9:14)

ದೇವರು 'ಸಮಸ್ತ ಲೋಕದಲ್ಲಿ ನನಗೆ ಸಮಾನರು ಬೇರೆ ಯಾರು ಇಲ್ಲ? ಎಂದು ಹೇಳುವಾಗ ಅದರ ಅರ್ಥವೇನು?'

'ಸೀಮಿತವಾಗಿರುವ ಮನಸ್ಸುಳ್ಳ ಮಾನವರು ಅಸೀಮಿತವಾಗಿರುವ ದೇವರ ಕಾರ್ಯಗಳನ್ನು ಮತ್ತು ಸ್ವಭಾವಗಳನ್ನು ಅರ್ಥಮಾಡಿಕೊಳ್ಳುವುದು ಅಸಾಧ್ಯವಾದ ಕೆಲಸವಾಗಿರುತ್ತದೆ. ಬಹಳ ಆಸಕ್ತಿಯುಳ್ಳ, ಶಕ್ತಿಶಾಲಿಯಾದ ಮತ್ತು ಉನ್ನತ ವಿದ್ಯಾಭ್ಯಾಸದ ಮನಸ್ಸಿಗೆ ಪರಿಶುದ್ಧ ದೇವರ ವಿಚಾರ ಯಾವಾಗಲೂ ಕೂಡ ರಹಸ್ಯದಲ್ಲಿ ಸುತ್ತಲಾಗಿರುವ ವಿಷಯವಾಗಿದೆ. **ಎಲೆನ್ ಜಿ ವೈಟ್, ಟೆಸ್ಟಿಮೊನಸ್ ಫಾರ್ ದಿ ಚರ್ಚ್, ಸಂಪುಟ. 5, ಪುಟ 699**.

'ದೇವರಿಗೆ ಸಮಾನರು ಯಾರು ಇಲ್ಲ' (1 ಅರಸುಗಳು 8:60), ಆತನು ಆಲೋಚಿಸುತ್ತಾನೆ, ಜ್ಞಾಪಕದಲ್ಲಿಟ್ಟುಕೊಳ್ಳುತ್ತಾನೆ, ಮತ್ತು ನಾವು ಗ್ರಹಿಸದ ರೀತಿಯಲ್ಲಿ ಆತನು ನಡೆದುಕೊಳ್ಳುತ್ತಾನೆ.ನಮ್ಮ ಊಹೆಗೆ ಹೇಗೆ ಬೇಕೋ ಹಾಗೆ ನಾವು ಆತನನ್ನು ಊಹಿಸಿಕೊಂಡರು ಕೂಡ ದೇವರು ದೇವರ ಹಾಗೆ ಉಳಿದುಬಿಡುತ್ತಾನೆ. ಆತನು ತಾನೆ ಮಂಜಿನ ಹನ, ಮೆದುಳು, ಮುಖ, ಮತ್ತು ವ್ಯಯಕ್ತಿಕವಾದ ವ್ಯಕ್ತಿತ್ವವನ್ನು ಉಂಟುಮಾಡಿದವನು ಮತ್ತು 'ದೇವರಿಗೆ ಸಮಾನರು ಯಾರು ಇಲ್ಲ' (1 ಅರಸುಗಳು 8:60). ಯಾಕೆಂದರೆ ಕೊನೆಗೆ ಆತನೇ ಸೃಷ್ಟಿಕರ್ತನು, ಸೃಷ್ಟಿಕರ್ತನಾಗಿ ಆತನುಸೃಷ್ಟಿಗೆ ಭಿನ್ನವಾಗಿ ನಿಲ್ಲುತ್ತಾನೆ.

ಈ ವಚನಗಳು ದೇವರು ತನ್ನ ಸೃಷ್ಟಿಗೆ ಹೇಗೆ ವಿಭಿನ್ನವಾಗಿದ್ದಾನೆ ಎಂದು ಹೇಗೆ ವಿವರಿಸುತ್ತವೆ. 1 ಸಮುವೇಲನು 2:2; ಕೀರ್ತನೆಗಳು 86:8; ಯೆಶಾಯ 55:8,9; ಯೆರೆಮಿಯ 10:10 ತೀತನಗೆ 1:2.

---

---

ದೇವರು ಯಾರು ಆತನು ಆತನ ಸ್ವಭಾವ ಏನು ಮತ್ತು ಆತನು ಏನು ಮಾಡುತ್ತಾನೆ



ಎಂಬುದನ್ನು ಗಮನಸಿದಾಗ ಆತನಗೆ ಸಮಾನರು ಯಾರು ಇಲ್ಲ ಎಂಬುದನ್ನು ಗಮನಿಸಬಹುದು. ಆದರೂ ಕೂಡ ಆತನು ಮಾನವರ ಪ್ರೀತಿ ಮತ್ತು ಆತ್ಮೀಯತೆಯನ್ನು ಪಡೆಯಲು 'ಪೈಪೋಟಿ'ಯನ್ನು ನಡೆಸುತ್ತಾನೆ. ಆದ್ದರಿಂದಲೇ ದೇವರು 'ಸ್ವಗೌರವ'ವುಳ್ಳ ದೇವರಾಗಿದ್ದಾನೆ. (ವಿಮೋಚನೆಕಾಂಡ 34:14) ದೇವರು ಮಾನವರನ್ನು ಸ್ವತಂತ್ರವಾಗಿರಲು ಸೃಷ್ಟಿಸಿದನು, ಅದರ ಅರ್ಥವೆಂದರೆ ನಾವು ಆತನನ್ನು ಆರಾಧಿಸಲು ಅಥವಾ ತಿರಸ್ಕರಿಸಲು ಸ್ವತಂತ್ರರು. ಇದು ಮಾನವನ ಅನೇಕ ಸಮಸ್ಯೆಗಳಿಗೆ ಮೂಲ ಕಾರಣವಾಗಿದೆ. ಬೇರೆ ದೇವರುಗಳನ್ನು ಆರಾಧಿಸುವುದು ಅವು ಯಾವ ರೂಪದಲ್ಲಿ ಇದ್ದರೂ ಕೂಡ ಅವುಗಳನ್ನು ಆರಾಧಿಸುವುದು, ಇಡೀ ವಿಶ್ವವನ್ನೇ ಸೃಷ್ಟಿಸಿ ಅದನ್ನು ತನ್ನ ಹತೋಟಿಯಲ್ಲಿ ಇಟ್ಟುಕೊಳ್ಳುವ ದೇವರನ್ನು ಆರಾಧಿಸುವುದಕ್ಕೆ ಸಮಾನವಾಗುವುದಿಲ್ಲ. ಅದರಿಂದಲೇ ಆತನು ಸ್ವಗೌರವವುಳ್ಳ ದೇವರಾಗಿದ್ದಾನೆ.

ನಮ್ಮ ಜೀವನದಲ್ಲಿ ಇರುವ ಅಶೆಗಳು ದೇವರೊಂದಿಗೆ ಒಂದು ವೇಳೆ ಪೈಪೋಟಿಯನ್ನು ನಡೆಸುತ್ತಿದ್ದರೆ ಅದರ ಕುರಿತಾಗಿ ಏನು ಮಾಡಬಹುದು ಎಂದು ಯೋಚಿಸಿರಿ.

**ಪಾಠ 3ದೇವರೋ ಅಥವಾ ಸಂಪತ್ತೋ** **ಜನವರಿ 18**

**ಗುರುವಾರ**

## ನಿಜವಾದ ಮಾಲಿಕತ್ವ

ನಾವು ಸೃಷ್ಟಿಯಿಂದ ಮತ್ತು ವಿಮೋಚನೆಯಿಂದ ದೇವರಿಗೆ ಸೇರಿದವರಾಗಿದ್ದೇವೆ. ನಾವು ದೇವರಿಗೆ ಸೇರಿದವರು ಮಾತ್ರವಲ್ಲದೆ ನಮ್ಮ ಎಲ್ಲಾ ಸಂಪತ್ತು ಕೂಡ ಆತನದಾಗಿದೆ. ನಮ್ಮ ಆಯ್ಕೆಯ ಸ್ವಾತಂತ್ರ್ಯವನ್ನು ಬಿಟ್ಟರೆ ನಮ್ಮದು ಅನ್ನುವುದು ಯಾವುದು ಇಲ್ಲ.

ಅದಕ್ಕೆ ವಿರುದ್ಧವಾಗಿ ಈ ಲೋಕದ ವಿಚಿತ್ರವಾದ ವಾದವೆಂದರೆ ನಮ್ಮ ಎಲ್ಲಾ ವಸ್ತುಗಳಿಗೆ ನಾವೇ ಯಜಮಾನರು ಎಂದು ಹೇಳುತ್ತದೆ. ಅದರೂ ಇದು ಒಂದು ಮೋಸ. ಕ್ರೈಸ್ತರು ತಮ್ಮ ಎಲ್ಲಾ ಅಸ್ತಿ ಅಂತಸ್ತುಗಳ ಯಜಮಾನರು ಎಂದು ಭಾವಿಸುವುದು ಸತ್ಯವೇದ ಬೋಧನೆಗೆ ವಿರುದ್ಧವಾದದ್ದು.

ನಾವಲ್ಲ, ದೇವರು, ನಮ್ಮ ಎಲ್ಲಾ ವಸ್ತುಗಳ ಒಡೆಯನಾಗಿದ್ದಾನೆ (ಯೋಬನು

38:4–11). ನಾವು ಕೇವಲ ಪರದೇಶಿಯರು ಮತ್ತು ಬಾಡಿಗೆದಾರರು (ಯಾಜಕಕಾಂಡ 25:23), ಇಸ್ರಾಯೇಲ್ಯರು ವಾಗ್ದಾನದ ದೇಶದಲ್ಲಿ ಇದ್ದ ಹಾಗೆ ನಾವು ಇದ್ದೇವೆ. ನಮ್ಮ ಮುಂದಿನ ಉಸಿರಿಗೂ ಕೂಡ ನಾವು ದೇವರ ಮೇಲೆ ಅವಲಂಬಿತರಾಗಿದ್ದೇವೆ.( ಅ .ಪೋ ಕೃ 17:25). ನಾವು ನಮ್ಮದು ಏನು ಎಂದು ಆಲೋಚಿಸುತ್ತೇವೋ ಅದು ದೇವರದ್ದು. ನಾವು ಆತನ ಪಾರುಪತ್ಯಗಾರರು, ಮತ್ತು ನಮಗೆ ಕಾಣುವ ಸ್ಪಷ್ಟ ಮತ್ತು ಅಸ್ಪಷ್ಟವಾದ ವಸ್ತುಗಳನ್ನು ದೇವರ ಮಹಿಮೆಗಾಗಿ ನಿರ್ವಹಿಸಬೇಕಾಗಿದೆ.

ದೇವರ ಯಜಮಾನತ್ವದಲ್ಲಿರುವ ವಸ್ತುಗಳ ಕುರಿತಾಗಿ ಈ ವಚನಗಳು ಏನು ಹೇಳುತ್ತವೆ:ಧರ್ಮೋಪದೇಶಕಾಂಡ 10:14; ಕೀರ್ತನೆ 50:10, 104:16; ಯೇಹೆಜ್ಕೇಲನು 18 ಹಗ್ಗಾಯ 2:8; 1 ಕೊರಿಂಥ 6:19,20. ನಮ್ಮ ಅಧೀನದಲ್ಲಿರುವ ವಸ್ತುಗಳನ್ನು ನಾವು ಹೇಗೆ ನೋಡಬೇಕು ಮತ್ತು ಹೇಗೆ ಅವುಗಳನ್ನು ಉಪಯೋಗಿಸಬೇಕು ಎಂದು ಈ ವಚನಗಳು ನಮಗೆ ಏನು ತಿಳಿಸುತ್ತವೆ.?

---

"ಎಲ್ಲಾ ವಸ್ತುಗಳು ದೇವರಿಗೆ ಸೇರಿದವು. ಮನುಷ್ಯರು ಆತನ ಮಾಲಿಕತ್ವವನ್ನು ನಿರ್ಲಕ್ಷಿಸಬಹುದು. ಆತನು ತನ್ನ ಅಮೂಲ್ಯವಾದ ಆಶೀರ್ವಾದಗಳನ್ನು ಅವರ ಮೇಲೆ ಸುರಿಸುವಾಗ ಅವುಗಳನ್ನು ತಮ್ಮ ಸ್ವಾರ್ಥಕ್ಕೆ ಉಪಯೋಗಿಸಿಕೊಂಡು ತಮ್ಮ ಶರೀರದ ಆಸೆಗಳನ್ನು ಪೋರೈಸಿಕೊಳ್ಳುವರು; ಆದರೆ ಒಂದು ದಿನ ಅವರ ಪಾರುಪತ್ಯಗಾರಿಕೆಗೆ ಅವರು ಲೆಕ್ಕ ಒಪ್ಪಿಸಬೇಕಾಗಿದೆ." **ಎಲೆನ್ ಜಿ ವೈಟ್, ಟೆಸ್ಟಿಮೊನಿಸ್ ಫಾರ್ ದಿ ಚರ್ಚ್, ಸಂಪುಟ 9, ಪುಟ 246**.

ದೇವರ ಮಾಲಿಕತ್ವ ಮತ್ತು ನಮ್ಮ ಪಾರುಪತ್ಯಗಾರಿಕೆಯು ಒಂದು ಸಂಬಂಧವನ್ನು ಏರ್ಪಡಿಸುತ್ತದೆ, ಇದರಿಂದ ನಾವು ಪರಲೋಕಕ್ಕೆ ಸಿದ್ದರಾಗುವಂತೆ ಮಾಡಿ ನಾವು ಆಶೀರ್ವಾದವನ್ನು ಹೊಂದಿ ಇತರರಿಗೂ ಆಶೀರ್ವಾದವಾಗಿ ಇರುವಂತೆ ನಮ್ಮನ್ನು ಸಿದ್ದಮಾಡುತ್ತದೆ. ಆದರೆ ಅಪ್ರಾಮಾಣಿಕನಾದ ಪಾರುಪತ್ಯಗಾರನು ತನ್ನ ಯಜಮಾನನು ಅಸ್ತಿಯೊಳಗೆ ಪ್ರವೇಶಿಸದಂತೆ ತಡೆಯುತ್ತಾನೆ. ನಿನ್ನೆಯ ದಿನ ನಾವು ಓದಿದ ಹಾಗೆ ದೇವರು ತನ್ನ ಚಿತ್ತವನ್ನು ನಮ್ಮ ಮೇಲೆ ಬಲವಂತವಾಗಿ ಹೇರುವುದಿಲ್ಲ. ಆತನು



ನಮ್ಮನ್ನು ಸೃಷ್ಟಿ ಮಾಡಿದ್ದಾನೆ, ಮತ್ತು ಆತನು ಹಿಂತಿರುಗಿ ಬರುವವರೆಗೂ ಆತನ ಅಸ್ತಿಯನ್ನು ನಾವು ನಿರ್ವಹಿಸುವುದಕ್ಕಾಗಿ ನೀಡಿದ್ದಾನೆ. ನಮ್ಮ ಮತ್ತು ಆತನ ಸಂಭಂಧವು ದೇವರು ನಮಗೆ ನೀಡಿರುವ ವಸ್ತುಗಳನ್ನು ಯಾವ ರೀತಿಯಲ್ಲಿ ನೋಡಿಕೊಳ್ಳುತ್ತೇವೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ.

ನಿಮ್ಮದು ಎಂದು ನೀವು ತಿಳಿದುಕೊಂಡಿರುವ ಯಾವ ವಸ್ತುಗಳು ಕೂಡ ನಿಮ್ಮದಲ್ಲ ಅವು ದೇವರಿಗೆ ಸೇರಿದವು ಎಂದು ಒಮ್ಮೆ ನೀವು ಆಲೋಚನೆ ಮಾಡಿದಾಗ ಅದು ನಿಜವಾಗಲೂ ಯಾವ ಅನುಭವವನ್ನು ನಿಮಗೆ ನೀಡುತ್ತದೆ. ಅದು ನಿಮ್ಮ ಬಗ್ಗೆ ಮತ್ತು ನೀವು ಹೊಂದಿರುವ ವಸ್ತುಗಳ ಕುರಿತಾಗಿ ಏನು ಹೇಳುತ್ತದೆ?

**ಪಾಠ 3 ದೇವರೋ ಅಥವಾ ಸಂಪತ್ತೋ** **ಜನವರಿ 19**

**ಶುಕ್ರವಾರ**

## ಹೆಚ್ಚಿನ ಚಿಂತನೆ:

ಪಾರುಪತ್ಯಗಾರಿಕೆ, ಅದನ್ನು ನಾವು ಅರ್ಥ ಮಾಡಿಕೊಳ್ಳುವ ಹಾಗೆ ದೇವರು ಅದಾಮ ಮತ್ತು ಹವ್ವಳನ್ನು ಸುಂದರವಾದ ಏದೆನ್ ತೋಟದ ಮನೆಯಲ್ಲಿ ಇತ್ತು ಅದನ್ನು ಅವರು ನೋಡಿಕೊಳ್ಳಬೇಕು ಮತ್ತು ನಿರ್ವಹಿಸಬೇಕಾಗಿತ್ತು. (ಆದಿಕಾಂಡ 2:15) ಇಂತಹ ಪರಿಪೂರ್ಣವಾದ ವಾತಾವರಣದಲ್ಲಿ ಈ ತೋಟವನ್ನು ಅವರು ಜೀವಿಸುವುದಕ್ಕೆ ಯೋಗ್ಯವಾಗುವಂತೆ ಮಾಡಬೇಕಾಗಿತ್ತು, ಆ ಕೆಲಸವೂ ಅಷ್ಟೊಂದು ಕಷ್ಟವಾಗಿರಲಿಲ್ಲ. ದೇವರು ಅವರ ಹೊಸ ಪಾತ್ರಗಳನ್ನೂ ಅನುಮೊದಿಸಿದ್ದನು ಮತ್ತು ಅವರಿಗೆ ಅವರ ಜವಾಬ್ದಾರಿಯನ್ನು ಕಲಿಸಿಕೊಟ್ಟಿದ್ದನು. ಏದೆನ್ತೋಟವನ್ನು ನೋಡಿಕೊಳ್ಳುವುದರಿಂದ ಅವರ ಹೊಸ ಕುಟುಂಬಕ್ಕೆ ಒಂದು ವಿನೂತನವಾದ ಸಂತೋಷವನ್ನು ಮತ್ತು ಅರ್ಥವನ್ನು ನೀಡಬಹುದಾಗಿತ್ತು.

'ನಿರ್ವಹಣೆ' ಎಂಬ ಪದಕ್ಕೆ ಇಬ್ರಿಯ ಭಾಷೆಯಲ್ಲಿ (ಆದಿಕಾಂಡ 1:26,28) ತನ್ನ ಅಧೀನಕ್ಕೆ ತೆಗೆದುಕೊಂಡು ಮತ್ತು ಅದನ್ನು ಆಳುವುದು. ಎಂದು ಭಾಷಾಂತರ ಮಾಡಲಾಗುತ್ತದೆ. ಇದನ್ನು ಹೇಳಲಾಗಿರುವ ಹಿನ್ನಲೆಯನ್ನು ನಾವು ನೋಡುವಾಗ ದರ್ಪದ ಅಧಿಕಾರವಲ್ಲ ಬದಲಿಗೆ ದೇವರ ಸೃಷ್ಟಿಯನ್ನು ಪ್ರೀತಿಯಿಂದ

ನೋಡಿಕೊಳ್ಳುವುದು. ಈ ಜವಾಬ್ದಾರಿಯು ನಿಂತಿಲ್ಲ. ಈ ವಾತವರಣದಲ್ಲಿ ಅದಾಮ ಮತ್ತು ಹವ್ವಳು ದೇವರ ಮಾಲಿಕತ್ವವನ್ನು ಗುರುತಿಸಬೇಕಾಗಿತ್ತು, ಅವರು ಆತನ ನಿರ್ವಾಹಕರಾಗಿದ್ದರು, ಅಥವಾ ಪಾರುಪತ್ಯಗಾರರಾಗಿದ್ದರು. ಆರಂಭದಿಂದಲೂ ಕೂಡ ದೇವರು ಯಜಮಾನನು ಮನುಷ್ಯರು ಮಾಲೀಕರಲ್ಲ ಎಂಬ ಸತ್ಯವನ್ನು ಅದಾಮ ಮತ್ತು ಹವ್ವಳು ತಿಳಿದುಕೊಳ್ಳಬೇಕಾಗಿತ್ತು. ಅವರು ದೇವರಿಗೆ ತಮ್ಮ ಕೆಲಸದಲ್ಲಿ ನಂಬಿಕೆಯನ್ನು ತೋರಿಸಬೇಕಾಗಿತ್ತು.

ಅದಾಮ ಮತ್ತು ಹವ್ವಳಿಗೆ ಏದೆನ್ ತೋಟವನ್ನು ಕಾಪಾಡುವುದಕ್ಕಾಗಿ ನೀಡಿದನು. ಅವರ ಕೆಲಸದಲ್ಲಿ ಅವರು ಸಂತೋಷವಾಗಿದ್ದರು. ಮನಸ್ಸು, ಹೃದಯ, ಮತ್ತು ಆಲೋಚನೆಯು ಪರಿಪೂರ್ಣವಾದ ಸಮತೋಲನದಲ್ಲಿದ್ದವು. ಅವರ ಕೆಲಸದಲ್ಲಿ ಅವರು ಯಾವುದೇ ಆಯಾಸವನ್ನು ಅನುಭವಿಸಲಿಲ್ಲ. ಅವರಿಗೆ ಬಳಲಿಕೆ ಆಗಲಿಲ್ಲ ಮತ್ತು ಅವರು ಪರಸ್ಪರ ಸಂಭಾಷಣೆಯಲ್ಲಿ ಇದ್ದರು. ಉದ್ಯೋಗವು ಸಂತೋಷದಾಯಕವಾಗಿತ್ತು. ದೇವರು ಮತ್ತು ಕ್ರಿಸ್ತನು ಅವರನ್ನು ಭೇಟಿ ಮಾಡಿದರು ಮತ್ತು ಅವರ ಜೊತೆಯಲ್ಲಿ ಮಾತನಾಡಿದರು. ಅವರಿಗೆ ಪರಿಪೂರ್ಣವಾದ ಸ್ವಾತಂತ್ರ್ಯವನ್ನು ನೀಡಲಾಗಿತ್ತು..... ಅವರ ಏದೆನ್ ತೋಟದ ಮನೆಗೆ ದೇವರು ಮಾಲಿಕನಾಗಿದ್ದನು. ಅದನ್ನು ಅವರು ಆತನ ಕೈಕೆಳಗೆ ಅನುಭವಿಸುತ್ತಿದ್ದರು. **ಎಲೆನ್ ಜಿ ವೈಟ್ ಮ್ಯಾನುಸ್ಕ್ರಿಪ್ಟ್ ರಿಲೀಸಸ್ ಸಂಪುಟ 10, ಪುಟ 327**.

ಚರ್ಚಿಸಬೇಕಾದ ಪ್ರಶ್ನೆಗಳು

1. ದೇವರು ಈ ಲೋಕದ ಮಾಲಿಕನಾಗಿದ್ದಾನೆ ಎಂಬ ಆಲೋಚನೆಯು ಪರಿಸರದ ಕುರಿತಾಗಿ ನಾವು ಯಾವ ರೀತಿಯಲ್ಲಿ ಯೋಚಿಸುವಂತೆ ಮಾಡುತ್ತದೆ? ಆದರೆ ಪ್ರಕೃತಿಯನ್ನು ಪೂಜಿಸುವಂತಹ ಕೆಲವು ಅತೀವಾದದ ರಾಜಕೀಯ ಗುಂಪುಗಳನ್ನು ದೂರ ಇಡಬೇಕಾಗುತ್ತದೆ,ಆದರೆ ಪರಿಸರವನ್ನು ಕಾಪಾಡುವುದರಲ್ಲಿ ಕ್ರೈಸ್ತರಾಗಿ ನಮ್ಮ ಸ್ವಭಾವ ಏನಾಗಿರಬೇಕು?

2.ದೇವರು 'ಸ್ವಗೌರವ'ವುಳ್ಳ ದೇವರು ಎಂಬುದರ ಕುರಿತಾಗಿ ಹೆಚ್ಚಾಗಿ ಆಲೋಚಿಸಿರಿ. ಇದನ್ನು ಬಹಳ ಸುಲಭವಾಗಿ ಅರ್ಥಮಾಡಿಕೊಳ್ಳುವ ವಿಚಾರವಲ್ಲ ಯಾಕೆಂದರೆ



ಅಸೂಯೆಯನ್ನು ಮಾನವನ ಆಲೋಚನೆಯಲ್ಲಿ ಬಹಳ ಕೆಟ್ಟ ಸ್ವಭಾವವಾಗಿ ನೋಡುತ್ತೇವೆ ಮತ್ತು ಅದರಿಂದ ದೂರ ಇರಬೇಕಾಗುತ್ತದೆ.ಆದರೆ ದೇವರಿಗೆ ಇದನ್ನು ನಾವು ಅನ್ವಯಿಸುವಾಗ ಇಂದೊಂದು ನಕಾರಾತ್ಮಕವಾದ ಗುಣವೆಂದು ನೋಡದೆ ಇರುವಂತೆ ಎಚ್ಚರಿಕೆ ವಹಿಸಬೇಕಾಗುತ್ತದೆ.

3.ಶಾರೀರಿಕವಾದ ವಸ್ತುಗಳನ್ನು ಸರಿಯಾಗಿ ಉಪಯೋಗಿಸುವುದು ಅಥವಾ ಅದನ್ನು ದುರುಪಯೋಗಪಡಿಸಿಕೊಳ್ಳುವುದು ಇವೆರಡರ ನಡುವೆ ಯಾವ ರೀತಿಯಲ್ಲಿ ವ್ಯತ್ಯಾಸವನ್ನು ಕಾಣಬಹುದು? ಈ ವ್ಯತ್ಯಾಸವನ್ನು ಕಂಡು ಕೊಳ್ಳುವುದು ಯಾಕೆ ಪ್ರಾಮುಖ್ಯವಾಗಿದೆ?